ರಾಷ್ಟ್ರೀಯ ಆರೋಗ್ಯ ಅಭಿಯಾನ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,
ಆರೋಗ್ಯ ಸೌಧ, ಬೆಂಗಳೂರು-560023
ದೂ ಸಂಖ್ಯೆ: 08022341985,
ಮಿಂಚಂಚೆ: mdnhmkar@gmail.com

ಕರ್ನಾಟಕ ಸರ್ಕಾರ

NO: HFW/NHM/CPHC-UHC/Integrated/30/2021-22 ದಿನಾಂಕ: 14.03.2022

## ಅಧಿಕೃತ ಜ್ಞಾಪನಾ ಪತ್ರ

**ವಿಷಯ :** ಆರ್ಥಿಕ ವರ್ಷ 2021-22ರ ಸಾಲಿನಲ್ಲಿ ಆಯ್ಕೆಯಾದ ಸಮುದಾಯ ಆರೋಗ್ಯ ಅಧಿಕಾರಿಗಳನ್ನು (ಸಿ.ಹೆಚ್.ಓ) (Integrated batch) ಕಾರ್ಯಕ್ರಮ, ಅಧ್ಯಯನ ಕೇಂದ್ರಗಳಿಗೆ ತರಬೇತಿಗೆ ನಿಯೋಜಿಸಿದ್ದು, ವೆಚ್ಚವನ್ನು ಹಂಚಿಕೆ ಮಾಡುವ ಕುರಿತು.

**ಉಲ್ಲೇಖ :**

1. **Mission Director (NHM), Circular No**: NHM/CPHC-UHC/Integrated/30/ 2021-22. ದಿ.04.01.2022.
2. ಕರ್ನಾಟಕ ಸರ್ಕಾರದ ನಡಾವಳಿಗಳು ಸರ್ಕಾರದ ಆದೇಶ ಸಂಖ್ಯೆ : ಆ.ಕು.ಕ 108 ಸಿಜಿಎಂ 2021 ಬೆಂಗಳೂರು ದಿ.27-08-2021.
3. NHM ROP Approval 2021-22 ಪತ್ರ ಸಂಖ್ಯೆ: M-11016/820-21 ದಿನಾಂಕ:20/05/2021 ರನ್ವಯ.

*********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ -02ರನ್ವಯ ಸರ್ಕಾರದ ಅನುಮೋದನೆಯಂತೆ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಉಪಕೇಂದ್ರ, ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ 636 ಬಿ.ಎಸ್.ಸಿ ನರ್ಸಿಂಗ್ ಪದವೀಧರರನ್ನು ಸಮುದಾಯ ಆರೋಗ್ಯ ಅಧಿಕಾರಿಗಳ (ಸಿ.ಹೆಚ್.ಓ) ಹುದ್ದೆಗೆ ನೇಮಕ ಮಾಡಲು ಕ್ರಮ ವಹಿಸಲಾಗಿತ್ತು. ಈ ಸಂಬಂಧ ದಿನಾಂಕ 04.02.2022 ರಂದು ಆನ್‌ಲೈನ್ ಮೂಲಕ ಪರೀಕ್ಷೆ ನಡೆಸಿದ್ದು, ಅಂತಿಮ ಆಯ್ಕೆ ಪಟ್ಟಿಯನ್ನು ಸಿದ್ದಪಡಿಸಿದ್ದು, ಈಗಾಗಲೇ 2 ಬ್ಯಾಚ್‌ಗಳಲ್ಲಿ ಒಟ್ಟು 559 ಅಭ್ಯರ್ಥಿಗಳನ್ನು ತರಬೇತಿಗೆ ನಿಯೋಜಿಸಲಾಗಿದೆ.

ಮುಂದುವರೆದು ತೃತೀಯ ಹಂತದಲ್ಲಿ 63 Integrated batch ಸಿ.ಹೆಚ್.ಓಗಳನ್ನು Induction ತರಬೇತಿಗೆ ದಿನಾಂಕ 17.03.2022 ರಿಂದ ನಿಯೋಜಿಸಲು ತಿಳಿಸಿದೆ.

ಸದರಿ ತರಬೇತಿಯನ್ನು ರಾಜ್ಯ ಎನ್.ಹೆಚ್.ಎಂ ವತಿಯಿಂದ ಕಾರ್ಯಕ್ರಮ ಅಧ್ಯಯನ ಕೇಂದ್ರಗಳ ಮೂಲಕ ನಡೆಸಲಾಗುತ್ತಿದೆ. ತತ್ಸಂಬಂಧ ಕಾರ್ಯಕ್ರಮ ಅಧ್ಯಯನ ಕೇಂದ್ರಗಳ ಅಡಿಯಲ್ಲಿ ನಡೆಸುತ್ತಿರುವ ಈ Induction ತರಬೇತಿಗೆ ನೇಮಕವಾದ 63 Integrated batch ಸಿ.ಹೆಚ್.ಓ ಗಳಿಗೆ ತಗಲುವ ವೆಚ್ಚವನ್ನು ಅನುಬಂಧ-1 ರಂತೆ ಸಂಸ್ಥೆಗೆ ಹಂಚಿಕೆ ಮಾಡಲಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದಲ್ಲಿ **Single Nodal Account (SNA) ಪದ್ಧತಿ ಚಾಲ್ತಿಯಲ್ಲಿರುವುದರಿಂದ Single Nodal Account (SNA) ಮುಖಾಂತರ ಎನ್.ಹೆಚ್.ಎಂ ಆರ್ಥಿಕ ವಿಭಾಗದಿಂದ ನೀಡಿರುವ ಷರತ್ತುಗಳನ್ವಯ ಅನುದಾನ ವೆಚ್ಚಮಾಡಲು ಕ್ರಮಕ್ಕಾಗಿ ಸೂಚಿಸಿದೆ.** ಅನುಬಂಧ-2 ರಲ್ಲಿ ಸಂಬಂಧಿಸಿದವರಿಗೆ ಅನ್ವಯವಾಗುವಂತೆ ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ನೀಡಲಾಗಿದೆ.

**ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್.)**

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:**

1. ಮುಖ್ಯ ಆರ್ಥಿಕ ಅಧಿಕಾರಿಗಳು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಸೌಧ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ:**

1. ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

2. ಎಲ್ಲಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ ಆರ್.ಸಿ.ಹೆಚ್ ಅಧಿಕಾರಿಗಳು/ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು/DPM's/ DAM's – ಮುಂದಿನ ಕ್ರಮಕ್ಕಾಗಿ.
3. ವೈದ್ಯಕೀಯ ಅಧೀಕ್ಷಕರು/ ಜಿಲ್ಲಾ ಶಸ್ತ್ರಚಿಕಿತ್ಸಕರು/ ಮುಖ್ಯಸ್ಥರು/ ಕಾರ್ಯಕ್ರಮ ಸಂಯೋಜಕರು ಸಂಬಂಧಿಸಿದ ಕಾರ್ಯಕ್ರಮ ಅಧ್ಯಯನ ಕೇಂದ್ರಗಳು.
4. ಎಲ್ಲಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕ್ಷೇಮ ಸಂಯೋಜಕರು ಹಾಗೂ ಎನ್.ಸಿ.ಡಿ. ಕೋ–ಆರ್ಡಿನೇಟರ್.

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕು.ಕ ಇಲಾಖೆ ವಿಕಾಸಸೌಧ ಬೆಂಗಳೂರು.
2. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು.
3. ಮಾನ್ಯ ಅಭಿಯಾನ ನಿರ್ದೇಶಕರು, ಎನ್.ಹೆಚ್.ಎಂ, ಆರೋಗ್ಯ ಸೌಧ, ಬೆಂಗಳೂರು.